ಒಂದು ನ್ಯಾಯ ಬೆಲೆಯ ಅಂಗಡಿ ಕೊಡಬೇಕೆಂದು ಮಾಡಿದ್ದೇವೆ ಇದರ ಪ್ರಕಾರವಾಗಿ ಒಟ್ಟು ೨೨ರಿಂದ ೨೩ ಸಾವಿರ ನ್ಯಾಯಬೆಲೆ ಅಂಗಡಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡಬೇಕಾಗುತ್ತದೆ. ಅಂದರೆ ಈಗಿರುವ ಲೆಕ್ಕಕ್ಕಿಂತ ೧೧ ಸಾವಿರ ಜಾಸ್ತಿ. ಈಗ ಇರತಕ್ಕಂಥ ೧೧,೨೭೫ ನ್ಯಾಯಬೆಲೆ ಅಂಗಡಿಗಳಲ್ಲಿ ಬಹುತೇಕ ಅಂಗಡಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆದ್ದರಿಂದ ಅವುಗಳನ್ನು ರದ್ದು ಮಾಡಿ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಹೊಸ ಅಂಗಡಿಗಳನ್ನು ರಚನೆ ಮಾಡುವುದಕ್ಕೆ ಹೇಳಿದ್ದೇನೆ. ಆಗ ಬೆಳ್ತಂಗಡಿಯಲ್ಲಿ ಈಗಿರುವುದಕ್ಕಿಂತ ಎರಡರಷ್ಟು ಅಂಗಡಿಗಳು ಈ ಕಾರ್ಯಕ್ರಮದ ಪ್ರಕಾರ ಆಗುತ್ತದೆ.

ಶ್ರೀ ಕೆ. ವಸಂತ ಬಂಗೇರ.—ಈ ನ್ಯಾಯ ಬೆಲೆ ಅಂಗಡಿಗಳಿಗೆ ಅಕ್ಕಿ, ಸೀಮೆ ಎಣ್ಣೆ ಸಮಯಕ್ಕೆ ಸರಿಯಾಗಿ ಸರಬರಾಜು ಆಗುತ್ತಿಲ್ಲ, ಎರಡನೆಯದಾಗಿ, ಉತ್ತಮವಾದ ಅಕ್ಕಿಯನ್ನು ಕೂಡ ಸರಬರಾಜು ಮಾಡುತ್ತಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಜಿ. ಬಸವಣ್ಣಪ್ಪ.—ಈ ಪಡಿತರ ಪದ್ಧತಿ ವ್ಯವಸ್ಥೆ ಮೊದಲು ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ೪೦ ಸಾವಿರ ಮೀರಿ ಜನಸಂಖ್ಯೆ ಇರತಕ್ಕಂಥ ಸಂಪಾರು ೩೮ ನಗರ ಪ್ರದೇಶಗಳಿಗೆ ಇದು ಸೀಮಿತವಾಗಿತ್ತು. ನಗರ ಪ್ರದೇಶಗಳಲ್ಲಿ ವಿತರಣೆಯಾಗಿ ಉಳಿದ ಅವಶ್ಯಕ ವಸ್ತುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಡುತ್ತಾ ಇದ್ದರು. ಇಲ್ಲದಿದ್ದರೆ ಇಲ್ಲ. ಇದನ್ನು ಮನಗಂಡು ಮಾನ್ಯ ಮುಖ್ಯ ಮಂತ್ರಿಯವರು ಗ್ರಾಮಾಂತರ ಪ್ರದೇಶಗಳ ಬಡಕೂಲಿಗಾರರಿಗೆ, ಬಡವರಿಗೆ ಎರಡು ರೂಪಾಯಿಗೆ ಒಂದು ಕೆ. ಜಿ, ಅಕ್ಕಿಯಂತೆ ಕೊಡತಕ್ಕಂಥ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಆಮೇಲೆ ಗ್ರಾಮಾಂತರ ಪ್ರದೇಶದಲ್ಲೂ ಸಹ ಅಗತ್ಯ ವಸ್ತುಗಳನ್ನು ವಿತರಣೆ ಮಾಡುವುದಕ್ಕೆ ಕಾರ್ಯಕ್ರಮ ರೂಪಿಸಿದ್ದಾರೆ.

ಶ್ರೀ ಕೆ. ವಸಂತ ಬಂಗೇರ.—ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿ, ಗೋಧಿ, ಸಕ್ಕರೆ ಇತ್ಯಾದಿ ಗಳನ್ನು ನಿಗದಿತ ಬೆಲೆಯಲ್ಲಿ ಮಾರಾಟ ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರ ಆಜ್ಞೆ ಮಾಡಿದೆಯೇ ? ಅಥವಾ ಒಂದೊಂದು ಅಂಗಡಿಯಲ್ಲಿ ಒಂದೊಂದು ರೀತಿಯ ಬೇಳೆಯಲ್ಲಿ ಮಾರಾಟ ಮಾಡಲಿಕ್ಕೆ ಅನುಮತಿ ಇದೆಯೆ ? ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಜಿ. ಬಸವಣ್ಣಪ್ಪ.—ನಿಗದಿತ ಬೆಲೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅದರಲ್ಲೂ ಕಡು ಬಡವರಿಗೆ ಎರಡು ರೂಪಾಯಿಗೆ ಒಂದು ಕೆ. ಜಿ. ಯಂತೆ ಅಕ್ಕಿ ಕೊಡುತ್ತಿದ್ದೇವೆ. ಹಾಗೆಯೇ ಕೆ.ಜಿ.ಗೆ ೧.೨೫ರೂ. ನಂತೆ ರಾಗಿ, ೧.೨೫ರೂ. ನಂತೆ ಗೋಧಿ, ೧,೫೦ರೂ. ನಂತೆ ಜೋಳ ಕೊಡತಕ್ಕಂಥ ಕಾರ್ಯಕ್ರಮ ನವೆಂಬರ್ ೧೦ರಿಂದ ಜಾರಿಗೆ ಬರುತ್ತದೆ. ಇನ್ನು, ಯಾರೇ ಆಗಲಿ ನಿಗದಿತ ಬೆಲೆಗಿಂತ ಹೆಚ್ಚು ಬೆಲೆಗೆ ಅಗತ್ಯವಸ್ತುಗಳತ್ನು ಮಾರಾಟ ಮಾಡಿದ್ದರೆ, ಸರ್ಕಾರಕ್ಕೆ ಅಧಿಕೃತವಾಗಿ ತಿಳಿಸಿದರೆ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಶಹಾಪುರ ತಾಲ್ಲೂಕಿನಲ್ಲಿ ೧೯೮೪–೮೫ರಲ್ಲಿ ಸ್ಥಾಪಿತವಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳು ಮತ್ತು ಅವುಗಳ ಬಗ್ಗೆ ಮಾಡಿದ ವೆಚ್ಚ.

೩೦೨. ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಾಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

೧೯೮೪–೮೫ನೇ ಸಾಲಿನಲ್ಲಿ ಶಹಾಪುರ ತಾಲ್ಲೂಕಿನಲ್ಲಿ ಸರ್ಕಾರವು ಎಲ್ಲೆಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾರಂಭಿಸಿದೆ ? ಹಾಗೂ ಅವುಗಳಿಗೆ ತಗಲಿದ ವೆಚ್ಚವೆಷ್ಟು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧೯೮೪-೮೫ನೇ ಸಾಲಿನಲ್ಲಿ ಶಹಪುರ ತಾಲ್ಲೂಕಿನಲ್ಲಿ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳು ಮಂಜೂರಾಗಿರುವುದಲ್ಲ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೇ ಶಹಪುರ ತಾಲ್ಲೂಕಿನಲ್ಲಿ ೧೯೭೧ರ ಸೆನ್ಸಸ್ ಪ್ರಕಾರ ವೆಕೆಂಟ್ ಬ್ಲಾಕ್ಸ್ ಎಷ್ಟು ಆಗಿತ್ತು ? ಈ ವರ್ಷ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಸಚಿವರು).—ಶಹಪುರ ತಾಲ್ಲೂಕಿನಲ್ಲಿ ಒಂದು ವೆಕೆಂಟ್ ಬ್ಲಾಕ್ ಇದೆ. ಒಂದು ವೇಳೆ ಅವರು ಇಪ್ಪತ್ತೈದು ಸಾವಿರ ರೂಪಾಯಿ ಹಣ ಮತ್ತು ನಾಲ್ಕು ಎಕರೆ ಜಮೀನು ಕೊಟ್ಟರೆ ಇದನ್ನು ಮಂಜೂರು ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ.— ಈಗಾಗಲೇ ಇದಕ್ಕೆ ೨೫ ಸಾವಿರ ರೂಪಾಯಿ ಮತ್ತು ನಾಲ್ಕು ಎಕರೆ ಭೂಮಿ ಕೊಡುವುದಾಗಿ ಸರ್ಕಾರಕ್ಕೆ ತಿಳಿಸಿದ್ದೇವೆ.

ಶ್ರೀ ಡಿ. ಬಿ. ಇನಾಮ್‌ದಾರ್ —ನಾನು ಇದನ್ನು ಪರಿಶೀಲನೆ ಮಾಡುತ್ತೇನೆ.

ಶಿವಮೊಗ್ಗದಲ್ಲಿ ಕುವೆಂಪು ರಂಗಮಂದಿರ

೩೫. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಾರ್ತಾ, ಯುವಜನ ಸೇವೆಗಳು, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

೧) ಶಿವಮೊಗ್ಗ ನಗರದಲ್ಲಿ ನಿರ್ಮಾಣವಾಗುತ್ತಿರುವ ಕುವೆಂಪು ರಂಗಮಂದಿರದ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ?

೨) ಈ ರಂಗಮಂದಿರ ನಿರ್ಮಾಣ ಯಾವ ಸಂಸ್ಥೆ ಪ್ರಾಧಿಕಾರಕ್ಕೆ ಪಹಿಸಲ್ಪಟ್ಟಿದೆ ?

೩) ರಂಗಮಂದಿರ ನಿರ್ಮಾಣದ ಅಂದಾಜು ವೆಚ್ಚ ಮತ್ತು ಇಲ್ಲಿಯವರೆಗೆ ಖರ್ಚಾಗಿರುವ ಹಣ.

೪) ಈ ನಿರ್ಮಾಣಕ್ಕೆ ನಿಗದಿಯಾಗಿರುವ ಅವಧಿ ಮತ್ತು ಕೆಲಸ ಪ್ರಾರಂಭವಾದ ದಿನ.

೫) ಸರ್ಕಾರ ಈ ರಂಗಮಂದಿರ ನಿರ್ಮಾಣಕ್ಕೆ ಕೊಟ್ಟಿರುವ ಸಹಾಯಧನ ಮತ್ತು ಇಲ್ಲಿಯವರೆಗೆ ಬಿಡುಗಡೆಯಾದ ಹಣ

೬) ರಂಗಮಂದಿರ ನಿರ್ಮಾಣ ಬಹಳ ಬೇಗ ಮುಗಿಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು.

ಶ್ರೀ ಜೀವರಾಜ ಆಳ್ವ (ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು).—

೧) ಇಲ್ಲ

೨) ಉದ್ಭವಿಸುವುದಿಲ್ಲ.

೩) ಉದ್ಭವಿಸುವುದಿಲ್ಲ.

೪) ಉದ್ಭವಿಸುವುದಿಲ್ಲ.

೫) ಉದ್ಭವಿಸುವುದಿಲ್ಲ.

೬) ಉದ್ಭವಿಸುವುದಿಲ್ಲ.

ಒನೇ ಪಟ್ಟಿಯಲ್ಲಿ ಮುಂದೂಡಲಾಗಿದ್ದ ಪ್ರಶ್ನೆಗಳು

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಮಂತ್ರಿಗಳು ಆಶ್ಚರ್ಯಕರವಾದ ಉತ್ತರ ಕೊಟ್ಟಿದ್ದಾರೆ. ಈ ರಂಗಮಂದಿರದ ಕೆಲಸ ಪ್ರಾರಂಭ ಮಾಡಲಿಕ್ಕೆ ನನಗೆ ತಿಳಿವಳಿಕೆ ಬಂದಮೇಲೆ, ಒಂದು ಸಮಿತಿಯನ್ನು ಮಾಡಿದ್ದಾರೆ. ಇದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರು, ಯುವಜನ ಸೇವಾ ಇಲಾಖೆಯ ಅಧಿಕಾರಿಗಳು